"ಮಧುರ ಮಕ್ಕಳೇ - ರಾತ್ರಿ ಎಚ್ಚರವಾಗಿದ್ದು ಸಂಪಾದನೆ ಮಾಡಿಕೊಳ್ಳಿ, ಅಮೃತವೇಳೆ ಏಳುವ ಅಭ್ಯಾಸ ಮಾಡಿಕೊಳ್ಳಿ"

ಪ್ರಶ್ನೆ: ಜ್ಞಾನದಲ್ಲಿ ಬಂದಾಗ ಯಾವ ನಶೆ ಏರುತ್ತದೆ, ಆ ನಶೆಯನ್ನು ನಿರಂತರವಾಗಿ ಇಟ್ಟುಕೊಳ್ಳುವ ವಿಧಿ ಏನಾಗಿದೆ?

ಉತ್ತರ: ಯಾವಾಗ ಜ್ಞಾನದಲ್ಲಿ ಹೊಸ-ಹೊಸ ಮಕ್ಕಳು ಬರುತ್ತಾರೆ ಆಗ ಬಹಳ ನಶೆ ಇರುತ್ತದೆ. ಆ ಸಮಯದಲ್ಲಿ ತಮ್ಮೊಂದಿಗೆ ತಾವೇ ಅನೇಕ ಪ್ರತಿಜ್ಞೆಗಳನ್ನೂ ಸಹ ಮಾಡುತ್ತಾರೆ. ಆ ಪ್ರತಿಜ್ಞೆಗಳನ್ನು ನಿಮ್ಮ ಪುಸ್ತಕದಲ್ಲಿ ಬರೆದಿಟ್ಟುಕೊಂಡು ಪುನರಾವರ್ತನೆ ಮಾಡುತ್ತಿದ್ದಾಗ ನಿರಂತರವಾದ ನಶೆ ಇರುತ್ತದೆ ಎಂದು ತಂದೆ ತಿಳಿಸುತ್ತಾರೆ. ಇಲ್ಲವಾದರೆ ಮಾಯೆಯ ಬಿರುಗಾಳಿಗಳಲ್ಲಿ ಬರುವ ಕಾರಣ ಆ ನಶೆ ಮಾಯವಾಗುತ್ತದೆ. ಒಂದುವೇಳೆ ನಡೆಯುತ್ತಾ-ನಡೆಯುತ್ತಾ ತಪ್ಪು ಆದರೆ ತಕ್ಷಣ ತಂದೆಗೆ ಹೇಳಿ ಹಗುರ ಮಾಡಿಕೊಳ್ಳಬೇಕು. ಪುನಃ ಆ ತಪ್ಪು ಮಾಡಬಾರದು ಏಕೆಂದರೆ ಅದು ವೃದ್ಧಿಯಾಗುತ್ತಿರುತ್ತದೆ.

ಗೀತೆ: ಮಾತ-ಪಿತರೇ ದುಃಖಿಗಳ ಮೇಲೆ ದಯೆ ತೋರಿ............

ಓಂ ಶಾಂತಿ. ಈ ಗೀತೆ ಬಹಳ ಚೆನ್ನಾಗಿದೆ, ಏಕೆಂದರೆ ಇಡೀ ಪ್ರಪಂಚದಲ್ಲಿ ದುಃಖಿಗಳಿರುವ ಕಾರಣ ತಂದೆ ತಾಯಿಗಳನ್ನು ಈ ರೀತಿ ನೆನಪು ಮಾಡುತ್ತಾ ಬಂದಿದ್ದಾರೆ........ ನಿಮ್ಮ ಕೃಪೆಯಿಂದ ಅಪಾರ ಸುಖ ಸಂಪತ್ತು ಪ್ರಾಪ್ತಿಯಾಗುತ್ತದೆ. ಈ ಸಮಯದಲ್ಲಿ ಇಡೀ ಪ್ರಪಂಚವು ದುಃಖದಲ್ಲಿರುವ ಕಾರಣ ತಂದೆಯನ್ನು ಬಹಳ ನೆನಪು ಮಾಡುತ್ತಾರೆ, ತಂದೆ ಇರುವಾಗ ತಾಯಿಯನ್ನು ಸಹ ನೆನಪು ಮಾಡಬೇಕಾಗುತ್ತದೆ. ಈ ಹಾಡು ಬಹಳ ಚೆನ್ನಾಗಿದೆ. ತಂದೆ ತಾಯಿಯ ಬಳಿ ಜನ್ಮ ಪಡೆಯುವುದರಿಂದ ನಮಗೆ ಒಂದು ಸೆಕೆಂಡಿನಲ್ಲಿ ಆಸ್ತಿ ಸಿಗುತ್ತದೆ ಎಂದು ನೀವು ತಿಳಿದುಕೊಂಡಿದ್ದೀರಿ. ಭಾರತದಲ್ಲಿಯೇ ಈ ಗಾಯನ ಮಾಡುತ್ತಾರೆ. ಈಗ ಮಕ್ಕಳು ಸಮ್ಮುಖದಲ್ಲಿ ಕುಳಿತುಕೊಂಡಿದ್ದೀರಿ. ಜಗದಂಬಾ ಜೊತೆಯಲ್ಲಿ ಅಗತ್ಯವಾಗಿ ಜಗತ್‌ಪಿತನೂ ಸಹ ಇರಬೇಕು. ಅವರಿಬ್ಬರಿಗೂ ಮೇಲೆ ಶ್ರೇಷ್ಠವಾಗಿರುವಂತಹವರು ಸುಖಧಾಮದ ಆಸ್ತಿಯನ್ನು ಕೊಡುವಂತಹವರು ಇರಬೇಕಲ್ಲವೆ. ಹೀಗೆ ಸುಖಧಾಮದ ಸ್ಥಾಪನೆ ಮಾಡುವ ಸಲುವಾಗಿ ತಾಯಿ, ತಂದೆ ಇರಬೇಕು. ಕೆಲವು ತಾಯಿ ತಂದೆಯರು ಶ್ರೀಮಂತರಾಗಿರುವ ಕಾರಣ ಅವರ ಮನೆ ಬಹಳ ಸುಂದರವಾಗಿರುತ್ತದೆ. ಕೆಲವು ತಾಯಿ, ತಂದೆ ಬಡವರಾಗಿರುವ ಕಾರಣ ಅವರ ಮನೆ ಅದೇ ರೀತಿಯಲ್ಲಿರುತ್ತದೆ. ಸತ್ಯಯುಗದಲ್ಲಿ ರಾಧೆ-ಕೃಷ್ಣರು ಎಷ್ಟೊಂದು ಶ್ರೀಮಂತರಾಗಿರುತ್ತಾರೆ ಅವರಿಗೆ ಮೊಟ್ಟ ಮೊದಲು ರಾಜ್ಯಭಾಗ್ಯ ಸಿಗುತ್ತದೆ. ರಾಧೆ ಅಗತ್ಯವಾಗಿ ಯಾವುದಾದರೂ ರಾಜನ ಬಳಿ ಜನ್ಮ ಪಡೆದ ಕಾರಣ ರಾಜಕುಮಾರಿ ಆಗಿರುತ್ತಾಳೆ ಹಾಗೂ ಕೃಷ್ಣ ರಾಜಕುಮಾರ ಆಗಿರುತ್ತಾನೆ. ಪುನಃ ಅವರಿಗೆ ವಿವಾಹ ಆಗುತ್ತದೆ. ಇದು ಸ್ಪಷ್ಟವಾದ ಮಾತಾಗಿದೆ. ತಾಯಿ ತಂದೆ ಈಗ ದೈವೀ ರಾಜಧಾನಿಯನ್ನು ಸ್ಥಾಪನೆ ಮಾಡುತ್ತಿದ್ದಾರೆ. ದೇವೀ-ದೇವತೆಗಳು ಸೂರ್ಯವಂಶದ ಮಹಾರಾಜಾ-ಮಹಾರಾಣಿಗಳಾಗಿದ್ದರು. ಅವರಿಗೆ ಈ ಪದವಿ ಹೇಗೆ ಪ್ರಾಪ್ತಿ ಆಯಿತೆಂದು ನೀವು ತಿಳಿದುಕೊಂಡಿದ್ದೀರಿ. ರಾಮ-ಸೀತೆಯರಿಗೆ ಚಂದ್ರವಂಶದ ರಾಜ್ಯಭಾಗ್ಯ ಹೇಗೆ ಪ್ರಾಪ್ತಿ ಆಯಿತು? ಈ ಕಲಿಯುಗದ ಅಂತ್ಯದಲ್ಲಂತೂ ಏನೂ ಇಲ್ಲವಾಗಿದೆ. ಈ ಪದವಿ ವಿದ್ಯೆಯಿಂದ ಸಿಕ್ಕಿರುವಂತಹ ರಾಜ್ಯಭಾಗ್ಯವಾಗಿದೆ. ಹೇಗೆ ಲೌಕಿಕ ವಿದ್ಯೆಯಿಂದ ಇಂಜಿನಿಯರ್, ಲಾಯರ್ ಮೊದಲಾದ ಸ್ಥಾನವನ್ನು ಪಡೆಯುತ್ತಾರೆ. ಅದೇ ರೀತಿ ಈ ವಿದ್ಯೆಯೂ ಸಹ ರಾಜರಿಗೂ ರಾಜರಾಗುವುದಾಗಿದೆ. ರಾಜ್ಯಭಾಗ್ಯದ ಸಲುವಾಗಿ ರಾಜಯೋಗವನ್ನು ಕಲಿಸುವಂತಹವರು ಒಬ್ಬ ತಂದೆ ಆಗಿದ್ದಾರೆ. ರಾಜ್ಯ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳಲು ಪುರುಷಾರ್ಥ ಮಾಡಿಸುವಂತಹ ಯಾವುದೇ ವಿಶ್ವವಿದ್ಯಾಲಯಗಳಿಲ್ಲ. ಗೀತಾ ಪಾಠಶಾಲೆ ಎಂದು ಇದರ ಹೆಸರಾಗಿದೆ. ಗೀತೆಯಿಂದ ರಾಜ ಪದವಿ ಪ್ರಾಪ್ತಿ ಆಗುತ್ತದೆ. ಒಳ್ಳೆಯದು, ವೇದ ಉಪನಿಷತ್ತಿನಿಂದ ಯಾವ ಪದವಿ ಸಿಗುತ್ತದೆ? ರಾಜಯೋಗವಂತೂ ಸ್ವಯಂ ಭಗವಂತನೇ ಕಲಿಸುತ್ತಾರೆ. ಇದು ಎಷ್ಟೊಂದು ಸಹಜ ಮಾತಾಗಿದೆ. ಇಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು-ಇದು ನಿನ್ನೆಯ ಮಾತಾಗಿದೆ. ಕ್ರಿಸ್ತನ ಮೂರು ಸಾವಿರ ವರ್ಷದ ಮೊದಲು ದೇವೀ-ದೇವತೆಗಳ ರಾಜ್ಯವಿತ್ತೆಂದು ಗಾಯನ ಮಾಡುತ್ತಾರೆ. ಅದು ಅವರಿಗೆ ಹೇಗೆ ಪ್ರಾಪ್ತಿಯಾಯಿತು? ಅವರಿಗೆ ವಿನಾಶದ ಮೊದಲು ಅವಶ್ಯವಾಗಿ ಭಗವಂತನೆ ಓದಿಸಿರಬೇಕು. ಓದಿಸಿದ ನಂತರ ವಿನಾಶವಾಗಿರಬೇಕು, ಆಮೇಲೆ ರಾಜಯೋಗದಿಂದ ಸತ್ಯಯುಗದಲ್ಲಿ ರಾಜ್ಯ ಪದವಿಯನ್ನು ಪಡೆದಿರಬೇಕು. ಇದು ಸಂಗಮಯುಗವಾಗಿದೆ.

ಒಂದು ಸೆಕೆಂಡಿನಲ್ಲಿ ಸೂರ್ಯವಂಶ, ಚಂದ್ರವಂಶ ರಾಜಧಾನಿ ಪ್ರಾಪ್ತಿಯಾಗುತ್ತದೆ ಎಂದು ನೀವು ಬರೆಯಬಹುದು. ಚಿತ್ರಗಳ ಬಗ್ಗೆ ನೀವು ಬಹಳ ಚೆನ್ನಾಗಿ ತಿಳಿಸಿಕೊಡಬಹುದು. ತಿಳಿಸಿಕೊಡುವಂತಹವರು ತುಂಬಾ ಬುದ್ಧಿವಂತರಾಗಿರಬೇಕು. ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿಯರು ಈಗ ಶಿವನ ಮಮ್ಮೊಕ್ಕಳಾಗಿದ್ದೀರಿ. ಒಂದು ಸೆಕೆಂಡಿನಲ್ಲಿ ಜೀವನ್ಮುಕ್ತಿಯನ್ನು ಪಡೆದುಕೊಳ್ಳಬಹುದು. ಆದರೆ ಜೀವನ್ಮುಕ್ತಿಯಲ್ಲಿ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುವ ಸಲುವಾಗಿ ಪುರುಷಾರ್ಥವನ್ನು ಮಾಡಬೇಕಾಗಿದೆ. ಈ ರೀತಿ ತಿಳಿಸಿಕೊಡಲು ಈ ಮೇಳಾ ಪ್ರದರ್ಶನಗಳನ್ನು ಮಾಡಲಾಗಿದೆ. ವಿಚಾರ ಮಾಡಬೇಕು. ಹೊಸ ಹೊಸ ಪಾಯಿಂಟ್ಸ್ ತಂದೆ ತಿಳಿಸುತ್ತಾರೆ. ದಿನ-ಪ್ರತಿದಿನ ಚಿತ್ರಗಳು ತುಂಬಾ ಸಹಜವಾಗಿ ನಾಟಕದನುಸಾರವಾಗಿ ಮಾಡುತ್ತಾ

ಹೋಗುತ್ತಾರೆ. ಕಲ್ಪದ ಹಿಂದೆ ಯಾವ ಪಾತ್ರ ನಡೆದಿದ್ದು ಅದೇ ನಡೆಯುತ್ತದೆ. ಈ ರೀತಿ ಐದು ಸಾವಿರ ವರ್ಷದ ನಂತರ ಇದೇ ಸಮಯದಲ್ಲಿ ಈ ಪ್ರದರ್ಶನ ನಡೆದಿತ್ತು. ಮತ್ತೆ ಕಲ್ಪದ ನಂತರ ನಡೆಯುತ್ತದೆ... ಎಂದು ಯಾರೂ ಸಹ ಬರೆಯಲು ಸಾಧ್ಯವಿಲ್ಲ. ಕಲ್ಪದ ಸಂಗಮದಲ್ಲಿ ಒಮ್ಮೆ ಮಾತ್ರ ಈ ಪ್ರದರ್ಶನವನ್ನು ಮಾಡಲಾಗುತ್ತದೆ. ಅಥವಾ ಐದು ಸಾವಿರ ವರ್ಷದ ನಂತರ ಈ ಪ್ರದರ್ಶನ ಪರಮಪಿತ ಪರಮಾತ್ಮನಿಂದ ಜೀವನ್ಮುಕ್ತಿ ಪದವಿಯನ್ನು ನೀವು ಪಡೆಯಲು ಅಥವಾ ತಿಳಿಸಿಕೊಡುವ ಸಲುವಾಗಿ ಈ ಪ್ರದರ್ಶನವನ್ನು ಮಾಡಲಾಗಿದೆ. ಈ ಪ್ರದರ್ಶನ ಅನೇಕ ದೇಶಗಳಲ್ಲಿ ನಡೆಯುತ್ತದೆ. ತಂದೆ ಹೊಸ-ಹೊಸ ಪಾಯಿಂಟ್ಸನ್ನು ತಿಳಿಸುತ್ತಿರುತ್ತಾರೆ. ಅಡಿಷನ್ ಮತ್ತು ಕರೆಕ್ಷನ್ ಆಗುತ್ತಿರುತ್ತದೆ. ಅವರು ರಾಮಾಯಣ ಮಹಾಭಾರತ ಮೊದಲಾದವುಗಳನ್ನು ಒಂದೇ ರೀತಿಯಾಗಿ ಮತ್ತೆ-ಮತ್ತೆ ಮುದ್ರಿಸುತ್ತಿರುತ್ತಾರೆ. ಆದುದರಿಂದ ತಂದೆಯು ಮಕ್ಕಳಿಗೆ ಪ್ರತಿ ಪ್ರದರ್ಶನದಲ್ಲಿ ಏನೇನು ಬರೆದಿರುತ್ತೇವೆಂದು ಪರಿಶೀಲನೆ ಮಾಡುತ್ತಾರೆ. ನಾನು ನಿಮಗೆ ಪ್ರತಿ ನಿತ್ಯ ಹೊಸ ಮಾತುಗಳನ್ನು ಹೇಳುತ್ತೇನೆ. ಒಂದೇ ದಿನದಲ್ಲಿ ಎಲ್ಲವನ್ನು ಹೇಳುವುದಿಲ್ಲವೆಂದು ತಂದೆ ಹೇಳುತ್ತಾರೆ. ಅವರು ಯುದ್ಧದ ಮೈದಾನದಲ್ಲಿ ಗೀತೆ ಹೇಳಿದರೆಂದು ಬರೆದು ಬಿಟ್ಟಿದ್ದಾರೆ. ಈ ರೀತಿ ಹದಿನೆಂಟು ಅಧ್ಯಾಯದ ಗೀತೆಯನ್ನು ಮಾಡಿದ್ದಾರೆ. ಯಾರು ಸಂಸ್ಕೃತದಲ್ಲಿ ಬುದ್ಧಿವಂತರಾಗಿರುತ್ತಾರೆ ಅವರು ಅರ್ಧ ಗಂಟೆಯಲ್ಲಿ ಎಲ್ಲಾ ಶ್ಲೋಕಗಳನ್ನು ಬಾಯಿ ಪಾಠ ಮಾಡಿ ಬಿಡುತ್ತಾರೆ. ಗೀತೆಯು ಮುಖ್ಯವಾಗಿದೆ. ಆದರೆ ಭಾಗವತದಲ್ಲಿ ಅನೇಕ ಕಥೆಗಳಿವೆ. ಗೀತೆಯನ್ನು ಸಂಸ್ಕೃತದಲ್ಲಿ ಮಾಡಿದ್ದಾರೆ. ಗೀತೆಯನ್ನು ಸಂಸ್ಕೃತದಲ್ಲಿ ಚಿಕ್ಕದಾಗಿ ಮಾಡಿದ್ದಾರೆ. ಜ್ಞಾನ ಸಾಗರ ತಂದೆ ಇಷ್ಟೊಂದು ಜ್ಞಾನವನ್ನು ಹೇಳುತ್ತಾರೆ.... ಸಾಗರವನ್ನು ಶಾಹಿಯನ್ನಾಗಿ ಮಾಡಿಕೊಂಡರು, ಪ್ರಕೃತಿಯನ್ನು ಲೇಖನಿಯನ್ನಾಗಿ ಮಾಡಿಕೊಂಡು, ಇಡೀ ಭೂಮಿಯನ್ನು ಕಾಗದವನ್ನಾಗಿ ಮಾಡಿಕೊಂಡರೂ ಸಹ ಸಂಪೂರ್ಣವಾಗಿ ವರ್ಣನೆ ಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಆದರೆ ಅವರು ಹದಿನೆಂಟು ಅಧ್ಯಾಯದಲ್ಲಿ ಎಲ್ಲಾ ಗೀತೆಯನ್ನು ಬರೆದಿದ್ದಾರೆ. ಆದರೆ ಆ ರೀತಿ ಸಂಸ್ಕೃತದ ಮಾತಿಲ್ಲ. ಹಿಂದಿ ಭಾಷೆ ನಡೆಯುತ್ತದೆ. ಅನೇಕ ಭಾಷೆಗಳಿರುವ ಕಾರಣ ಒಬ್ಬರೇ ಅನೇಕ ಭಾಷೆಗಳನ್ನು ಕಲಿಯಲು ಸಾಧ್ಯವಿಲ್ಲ. ಪ್ರಯತ್ನ ಪಟ್ಟು ಐದು ಆರು ಭಾಷೆಗಳನ್ನು ಕಲಿತವರಿಗೆ ತುಂಬಾ ಗೌರವವಿರುತ್ತದೆ. ಈಗ ತಂದೆ ಎಲ್ಲಾ ಭಾಷೆಗಳಲ್ಲಿ ತಿಳಿಸಲು ಸಾಧ್ಯವಿಲ್ಲ. ಕೇವಲ ಹಿಂದಿ ಭಾಷೆಯಲ್ಲಿ ಮಾತ್ರ ತಿಳಿಸುತ್ತಾರೆ. ಹೀಗೆ ಹಿಂದಿ ಹಾಗೂ ಆಂಗ್ಲ ಭಾಷೆಯನ್ನು ಅಲ್ಪ-ಸ್ವಲ್ಪ ಎಲ್ಲರೂ ತಿಳಿದುಕೊಂಡಿರುತ್ತಾರೆ. ಮಕ್ಕಳಿಗೆ ತಂದೆ ಹಿಂದಿಯಲ್ಲೇ ತಿಳಿಸಿಕೊಡುತ್ತಾರೆ. ಭಗವಂತ ಬಂದು ಭಕ್ತರಿಗೆ ಭಕ್ತಿಯ ಫಲವನ್ನು ಕೊಡುತ್ತಾರೆ. ಅನೇಕ ಭಕ್ತರಿದ್ದು ಭಗವಂತ ಒಬ್ಬರೇ ಆಗಿದ್ದಾರೆ. ಪತಿತ ಪಾವನ ಬಾ ಎಂದು ಕರೆಯುತ್ತಾರೆ ವಿನಃ ಭಗವಂತ ಬಾ ಎಂದು ಹೇಳುವುದಿಲ್ಲ. ಸರ್ವರಿಗೂ ಪಿತ ಒಬ್ಬರೇ ಆಗಿದ್ದಾರೆ. ಅವರೇ ಪರಮಪಿತ ಪರಮಾತ್ಮ ರಚಯಿತನಾಗಿದ್ದಾರೆ. ಸುಖಕ್ಕಾಗಿ ರಚನೆಯನ್ನು ರಚಿಸುತ್ತಾರೆ. ತಂದೆ ಮಕ್ಕಳನ್ನು ತಮ್ಮ ಸುಖಕ್ಕಾಗಿ ಇಷ್ಟ ಪಡುತ್ತಾರೆ. ಪರಮಪಿತ ಪರಮಾತ್ಮ ಸ್ವರ್ಗವನ್ನು ರಚಿಸಿ ಮಕ್ಕಳನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ಆ ಮಕ್ಕಳಿಗೆ ದೇವೀ-ದೇವತೆಗಳೆಂದು ಕರೆಯಲಾಗುವುದು. ಆದರೆ ಇಡೀ ವಿಶ್ವದ ಮಕ್ಕಳಿಗೆ ಆ ರೀತಿ ಕರೆಯುವುದಿಲ್ಲ. ಇದು ಬಹಳ ಗುಪ್ತ ಮಾತುಗಳಾಗಿವೆ. ಪರಮಪಿತ ಪರಮಾತ್ಮ ಆಡಮ್ ಈವ್ ಮೂಲಕ ಸೃಷ್ಟಿಯನ್ನು ಹೇಗೆ ರಚಿಸುತ್ತಾರೆ? ಪರಮಾತ್ಮ ಬೇರೆ ಆಗಿದ್ದಾರೆಂದು ನಿಧಾನ-ನಿಧಾನವಾಗಿ ತಿಳಿದುಕೊಳ್ಳುತ್ತಾರೆ. ವೃಕ್ಷವು ವೃದ್ಧಿ ಆಗುತ್ತಾ ಹೋಗುತ್ತದೆ. ಭಾರತಕ್ಕೆ ಮಾತ್ರ ಮುಕ್ತಿ-ಜೀವನ್ಮುಕ್ತಿ ಪ್ರಾಪ್ತಿ ಆಗುವುದು. ಭಾರತವೇ ಸುಖಧಾಮವಾಗಿದ್ದು ಅಲ್ಲಿ ದೇವೀ-ದೇವತೆಗಳ ರಾಜ್ಯವಿರುತ್ತದೆ ಭಾರತವು ಪ್ರಾಚೀನ ಖಂಡವಾಗಿದೆ. ಅವರ ನಂತರ ಇಸ್ಲಾಮಿ ಧರ್ಮ, ಬೌದ್ಧ ಖಂಡ ಸ್ಥಾಪನೆ ಆಯಿತು. ಈ ರೀತಿ ಯಾವ ಸಮಯದಲ್ಲಿ ಯಾವ ಧರ್ಮದ ಸ್ಥಾಪನೆಯಾಗಬೇಕು ಆ ಸಮಯದಲ್ಲಿ ಆ ಧರ್ಮ ಸ್ಥಾಪನೆಯಾಗುತ್ತಾ ಹೋಗುತ್ತದೆ. ಈ ರೀತಿ ಇದೆಲ್ಲಾ ಬಹಳ ಸಹಜವಾಗಿದೆ. ಯಾವ ಸಮಯದಲ್ಲಿ ಯಾವ ಸಾಂಪ್ಲಿಂಗ ಹಾಕಲಾಗ ಬೇಕಾಗುವುದೋ ಅದನ್ನೇ ಹಾಕಲಾಗುತ್ತದೆ.

ಬಾಬಾ ನಾವು ನಾಲ್ಕು ದಿನದ ಮಕ್ಕಳು-ನೋಡಿ ಮಕ್ಕಳು ಹೇಗೆ ಪತ್ರ ಬರೆಯುತ್ತಾರೆ? ನಾವು ನಿಮ್ಮನ್ನು ತಿಳಿದುಕೊಂಡಿದ್ದೇವೆ. ಕೆಲವರು ಎಷ್ಟೊಂದು ದಿನಗಳಿಂದ ಬರುತ್ತಿರುತ್ತಾರೆ, ಆದರೆ ಒಂದು ಪತ್ರವನ್ನೂ ಸಹ ಬರೆಯುವುದಿಲ್ಲ. ಕೆಲವರು ತಕ್ಷಣ ಪತ್ರ ಬರೆಯುತ್ತಾರೆ. ಸಮಯ ಕಳೆಯುತ್ತಾ ಮಾಯೆ ಬಹಳ ಬಿರುಗಾಳಿಯನ್ನು ತರುತ್ತದೆ. ಆ ಬಿರುಗಾಳಿಯಿಂದ ಹಳೆಯ ಎಲೆಗಳು ಉದರಿ ಹೋಗುತ್ತವೆ. ಹೊಸ ಮಕ್ಕಳಿಗೆ ಮೊದಲು ಖುಷಿಯ ನಶೆ ಇರುತ್ತದೆ. ಬಾಬಾ ನಾವು ನಿಮಗೆ ಮಕ್ಕಳಾಗಿದ್ದೇವೆ... ಆದರೆ ಮಾಯೆ ಕಡಿಮೆಯಿಲ್ಲ. ಪ್ರತಿಜ್ಞೆ ಮಾಡುವಾಗ ತಮ್ಮ ಪುಸ್ತಕದಲ್ಲಿ ಏನೇನು ಪ್ರತಿಜ್ಞೆ ಮಾಡಿದ್ದೇವೆಂದು ಬರೆದಿಟ್ಟುಕೊಳ್ಳಬೇಕು. ಕೆಲವರಂತೂ ಪ್ರತಿಜ್ಞೆ ಮಾಡಿದ ನಂತರ ಎಂದಿಗೂ ತಮ್ಮ ಡೈರಿಯನ್ನು ನೋಡಿಕೊಳ್ಳುವುದಿಲ್ಲ. ಆದರೆ ಈ ರೀತಿ ಪ್ರತಿಜ್ಞೆ ಮಾಡಿದರೆ ಲಾಭವೇನು ಸಿಗುವುದಿಲ್ಲ. ನಾವು ಬರೆದುಕೊಂಡಿರುವ ಪ್ರತಿಜ್ಞೆಗಳನ್ನು ನಮ್ಮ ನಂತರ ಬರುವವರು ಓದಿಕೊಳ್ಳುತ್ತಾರೆಂದು ತಿಳಿದುಕೊಳ್ಳಬಾರದು. ಈ ಪ್ರಪಂಚದಲ್ಲಿ ಮಕ್ಕಳು-ಮೊಮ್ಮಕ್ಕಳು ಯಾರು ಜ್ಞಾನದಲ್ಲಿ ಮುಂದುವರೆಯುವವರು ಮುಂದುವರೆದಂತೆ, ಕಡಿಮೆ ಓದುವಂತಹವರು ಕಚ್ಚಾ ಆಗಿಯೇ ಉಳಿದು ಬಿಡುತ್ತಾರೆ. ಸ್ವಲ್ಪವೇನಾದರು ತಪ್ಪು ಮಾಡಿ ತಂದೆಗೆ ಸತ್ಯವನ್ನು ಹೇಳದೇ ಇದ್ದಾಗ ವೃದ್ಧಿ ಆಗುತ್ತಿರುತ್ತದೆ. ನನಗೆ ಮೊದಲೇ ಏಕೆ ತಿಳಿಸಿಕೊಡಲಿಲ್ಲ ಎಂದು ಹೇಳುತ್ತಾ ಮಗ ತನ್ನ ತಾಯಿಯ ಕಿವಿಯನ್ನು ಇಡಿದುಕೊಂಡು ನನಗೆ ಮೊದಲೇ ಹೇಳಿದ್ದರೆ ಜೈಲಿಗೆ ಬರುವ ಅಗತ್ಯ ಇರುತ್ತಿರಲಿಲ್ಲ ಎಂದು ತನ್ನ ತಾಯಿಯನ್ನು ಕೇಳಿದನೆಂಬ ಒಂದು ಕಥೆಯಿದೆ. ಈ ಎಲ್ಲಾ ಕಥೆಗಳು ಉದಾಹರಣೆ ಆಗಿವೆ. ಎಂದಿಗೂ ಕಳ್ಳತನ ಮಾಡಬಾರದು. ಇಲ್ಲವೆಂದರೆ ಧರ್ಮರಾಜನಿಂದ ಬಹಳ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಈಗ ತಂದೆಯಿಂದ ಎಷ್ಟು ಆಸ್ತಿ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ. ವಿಶ್ವದ ರಾಜ್ಯಭಾಗ್ಯವನ್ನೇ ತಂದೆ ಕೊಡುವಾಗ ಇನ್ನೇನು ಕೊಡಬೇಕು. ಬಾಕಿ

ಕೊಡುವುದೇನು ಉಳಿದಿದೆ? ಈಗ ನಮ್ಮದು ಸಾಮಾನ್ಯ ಜೀವನ ಆಗಿರುವ ಕಾರಣ ದೇಹೀ-ಅಭಿಮಾನಿ ಆಗಬೇಕು. ದೇಹ ಸಹಿತ ಇಡೀ ಪ್ರಪಂಚವನ್ನು ನಾವು ಮರೆಯಬೇಕು. ಲೋಭ ಇರಬಾರದು. ಏನು ಸಿಗುತ್ತದೆ ಅದರಲ್ಲಿಯೇ ತೃಪ್ತಿ ಪಡಬೇಕು. ಆದುದರಿಂದ ಬೇಡುವುದಕ್ಕಿಂತ ಸಾಯಿವುದು ಮೇಲೆಂದು ಹೇಳಲಾಗುತ್ತದೆ. ಶಿವ ತಂದೆಯ ಭಂಢಾರದಿಂದ ಎಲ್ಲವು ಸಿಗುತ್ತದೆ. ಅಮೃತವೇಳೆ ತಾನೇ ತಾನಾಗಿ ಎದ್ದೇಳುವ ಅಭ್ಯಾಸ ಮಾಡಬೇಕು. ರಾತ್ರಿಯೆಲ್ಲಾ ಎಚ್ಚರಿಕೆಯಿಂದಿದ್ದು ಸಂಪಾದನೆ ಮಾಡಿಕೊಳ್ಳಬೇಕು. ತಂದೆಯು ಅನುಭವೀ ಶರೀರವನ್ನು ತೆಗೆದುಕೊಂಡಿದ್ದಾರೆ. ಬ್ರಹ್ಮಾ ತಂದೆಯು ಸಹ ರತ್ನದ ವ್ಯಾಪಾರಿ ಆಗಿದ್ದರು, ಆದರೆ ಇದು ಜ್ಞಾನ ರತ್ನದ ವ್ಯಾಪಾರವಾಗಿದೆ. ಇಂದು ಬಹಳ ನಕಲಿ ವಜ್ರಗಳನ್ನು ತಯಾರು ಮಾಡುತ್ತಾರೆ. ಈ ರೀತಿ ಚಿತ್ರಗಳ ಬಗ್ಗೆ ತಿಳಿಸಿಕೊಡುವುದು ಬಹಳ ಸಹಜವಾಗಿದೆ. ಒಂದು ಸೆಕೆಂಡಿನಲ್ಲಿ ತಂದೆಯಿಂದ ಆಸ್ತಿಯನ್ನು ತೆಗೆದುಕೊಳ್ಳಿ. ಮೇಲೆ ತಂದೆ ಇದ್ದಾರೆ. ಇವರು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದಾರೆ. ಯಾವಾಗ ತಂದೆಯ ಮಕ್ಕಳಾಗಿದ್ದೀರಿ ಜೀವನ್ಮುಕ್ತಿ ಆಸ್ತಿ ನಿಗಧಿ ಆಗಿ ಬಿಡುತ್ತದೆ. ಆದರೆ ಪುರುಷಾರ್ಥ ಮಾಡಿ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳಬೇಕು. ಪರಮಪಿತ ಪರಮಾತ್ಮ ಬ್ರಹ್ಮನ ಮೂಲಕ ಮನುಷ್ಯ ಸೃಷ್ಟಿಯನ್ನು ರಚಿಸುತ್ತಾರೆ. ಬಾಬಾ ನಾವು ನಿಮ್ಮನ್ನು ಮಿಲನ ಮಾಡಲು ಸಾಧ್ಯವಿಲ್ಲದಿದ್ದರೂ ನಿಮ್ಮನ್ನೆ ನೆನಪು ಮಾಡಿ ಅಗತ್ಯವಾಗಿ ಆಸ್ತಿಯನ್ನು ಪಡೆಯುತ್ತೇವೆಂದು ಬಂಧನದಲ್ಲಿರುವವರು ತಂದೆಗೆ ಹೇಳುತ್ತಾರೆ. ಈ ರೀತಿ ಎಷ್ಟೊಂದು ಮಕ್ಕಳಿದ್ದಾರೆ. ತಂದೆಯ ಮನೆಯ ಪ್ರಭಾವ ಜಾಸ್ತಿ ಆಗುತ್ತಾ ಬಂಧನದಲ್ಲಿರುವವರ ಬಂಧನವೂ ಸಹ ಬಿಡುಗಡೆ ಆಗುತ್ತದೆ. ಬಂಧನದಲ್ಲಿರುವ ಅಕ್ಕಂದಿರು ತಮ್ಮ ಪತಿಗೂ ಸಹ ಗುರುವಾಗಿ ಬಿಡುತ್ತಾರೆ. ಅಂತಿಮದಲ್ಲಿ ಈ ರೀತಿ ಬಂಧನದಲ್ಲಿರುವವರ ಲಿಸ್ಟ್ ತಯಾರಾಗುತ್ತದೆ. ತಮ್ಮ ಪತ್ನಿಯು ನಮಗೆ ಗುರು ಆದರೆಂದು ಪತ್ರ ಬರೆಯುತ್ತಾರೆ. ಹಾಗೆಯೇ ಸುಮ್ಮನೆ ಗುರು ಎಂದು ಒಪ್ಪುಕೊಳ್ಳುವುದಿಲ್ಲ, ಮಾತಾ ಗುರು ವಿನಃ ಯಾರ ಉದ್ಧಾರವೂ ಆಗುವುದಿಲ್ಲ. ಕಳಸವನ್ನು ಸಹ ಜಗತ್‌ಮಾತೆಗೆ ಸಿಗುವುದರಿಂದ ಜಗತ್‌ಮಾತೆ ಗುರುವಾಗಿದ್ದಾರಲ್ಲವೆ! ವರ್ತಮಾನದಲ್ಲಿ ಸ್ತ್ರೀಯರಿಗೆ ಬಹಳ ಗೌರವ ಕೊಡುತ್ತಾರೆ. ಮಾತಾ ಗುರು ವಿನಃ ಮುಕ್ತಿ-ಜೀವನ್ಮುಕ್ತಿ ಪ್ರಾಪ್ತಿಯಾಗುವುದಿಲ್ಲವೆಂದು ತಂದೆ ತಿಳಿಸುತ್ತಾರೆ. ಯಾವಾಗ ಈ ತಾಯಿಯ ಮೂಲಕ ದತ್ತು ತೆಗೆದುಕೊಳ್ಳುತ್ತಾರೆ, ಆಗ ಜೀವನ್ಮುಕ್ತಿಯ ಪ್ರಾಪ್ತಿ ಆಗುತ್ತದೆ. ಆದುದರಿಂದ ಮಾತೆಗೆ ಗುರು ಎಂದು ತಿಳಿದುಕೊಳ್ಳಬೇಕು. ಮಕ್ಕಳು ತಮ್ಮ ಅಹಂಕಾರವನ್ನು ತೋರಿಸದಂತೆ ಮಾತೆಯರಿಗೆ ಗೌರವ ಕೊಡಬೇಕು. ದೇಹಾಭಿಮಾನದಲ್ಲಿ ಬಾರದಂತೆ ತಾಯಿಯನ್ನು ಅನುಕರಣೆ ಮಾಡಬೇಕು. ತಮ್ಮನ್ನು ನಿರಹಂಕಾರಿ ಎಂದು ತಿಳಿದುಕೊಳ್ಳಬೇಕು. ತಂದೆಯೂ ಸಹ ತಮ್ಮನ್ನು ನಿರಾಕಾರನೆಂದು ತಿಳಿದುಕೊಳ್ಳುತ್ತಾರೆ. ನಾನು ನಿರಾಕಾರ ಹಾಗೂ ಸಾಕಾರವೆಂದು ನೀವು ಹೇಳುತ್ತೀರಿ. ಹೇಗೆ ಆಸ್ಪತ್ರೆ ಹಾಗೂ ವಿಶ್ವ ವಿದ್ಯಾಲಯ ಎಂದು ಬರೆಯುತ್ತಾರಲ್ಲವೆ! ಈ ಎಲ್ಲಾ ಮಾತುಗಳನ್ನು ತಿಳಿದುಕೊಳ್ಳುವ ಸಲುವಾಗಿ ತಿಳಿಸಿಕೊಡುತ್ತಿದ್ದಾರೆ. ಆದರೆ ಎಲ್ಲಾ ಮಕ್ಕಳಲ್ಲಿ ಏಕರಸವಾಗಿ ಧಾರಣೆ ಆಗುವುದಿಲ್ಲ. ಪುರುಷಾರ್ಥ ಮಾಡಿ ಧಾರಣೆ ಮಾಡಬೇಕು ಹಾಗೂ ಮಾಡಿಸಬೇಕು. ಒಂದು ಕಡೆ ಕೇಳುತ್ತಾ ಮತ್ತೊಂದು ಕಡೆ ಹೇಳಬೇಕು, ಇದನ್ನು ತಕ್ಷಣ ಮಾಡಿದ ದಾನಕ್ಕೆ ಮಹಾಪುಣ್ಯವೆಂದು ಹೇಳುತ್ತಾರೆ. ಧನವನ್ನು ದಾನ ಮಾಡದಿದ್ದರೆ ಪುಣ್ಯಾತ್ಮ ಹೇಗೆ ಆಗುತ್ತೀರಿ?

ನಿಮಗೆ ಇಡೀ ವಿಶ್ವದ ಮಾಲೀಕರಾಗುವ ಶ್ರೇಷ್ಠ ಆಸೆ ಇರುವ ಕಾರಣ ನೀವು ಎಲ್ಲರಿಗಿಂತ ಬಹಳ ಲೋಭಿಗಳಾಗಿದ್ದೀರಿ. ಪ್ರತಿಯೊಬ್ಬರನ್ನು ಸದಾ ಸುಖಿ ಹಾಗೂ ಶಾಂತಿಮಯ ಮಾಡಬೇಕು. ಮನುಷ್ಯ ಮಾತ್ರರೆಲ್ಲರನ್ನು ಕಲಿಯುಗೀ ಭ್ರಷ್ಟಾಚಾರಿಗಳಿಂದ ಸತ್ಯಯುಗೀ ಶ್ರೇಷ್ಠಾಚಾರಿಗಳನ್ನಾಗಿ ಮಾಡಬೇಕು. ಭಾರತದಲ್ಲಿ ದೇವೀ-ದೇವತೆಗಳಿದ್ದರು, ಈಗ ಇಲ್ಲ, ಪುನಃ ಅಗತ್ಯವಾಗಿ ನಾವು ದೇವತೆಗಳು ಆಗುತ್ತೇವೆ. ಅದನ್ನು ಸ್ವರ್ಗವೆಂದು ಕರೆಯಲಾಗುವುದು. ವೈಕುಂಠವೆಂಬ ಅಕ್ಷರ ಬಹಳ ಚೆನ್ನಾಗಿದೆ. ನಾವು ಸ್ವರ್ಗದ ಮಾಲೀಕರಾಗಲು ಪುರುಷಾರ್ಥ ಮಾಡುತ್ತಿದ್ದೇವೆ. ಒಬ್ಬ ತಂದೆಯ ವಿನಃ ಎಲ್ಲವನ್ನು ಮರೆಯಬೇಕು. ಎಲ್ಲರೊಂದಿಗೆ ನಷ್ಟೋಮೋಹಿಗಳಾಗಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಕ ಮಕ್ಕಳಿಗೆ ಆತ್ಮೀಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಈ ಸರಳವಾದ ಜೀವನದಲ್ಲಿ ಸಂಪೂರ್ಣವಾಗಿ ದೇಹೀ-ಅಭಿಮಾನಿ ಆಗಬೇಕು. ಯಾವುದೇ ವಸ್ತುವಿನೊಂದಿಗೆ ಹೆಚ್ಚು ಲೋಭವಿಟ್ಟುಕೊಳ್ಳಬಾರದು. ಏನು ಸಿಗುತ್ತದೆ ಅದರಲ್ಲಿಯೇ ತೃಪ್ತಿಯಾಗಬೇಕು. ಬೇಡುವುದಕ್ಕಿಂತ ಸಾಯಿವುದು ಮೇಲು.

2. ತಮ್ಮ ಅಹಂಕಾರವನ್ನು ಇಟ್ಟುಕೊಳ್ಳದೆ ಮಾತೆಯರಿಗೆ ಗೌರವ ಕೊಡಬೇಕು. ತಂದೆ ಸಮಾನ ನಿರಾಕಾರಿ-ನಿರಹಂಕಾರಿ ಆಗಬೇಕು. ಜ್ಞಾನ ಧನವನ್ನು ದಾನ ಮಾಡಬೇಕು.

ವರದಾನ: ನಾಲ್ಕೂ ವಿಷಯಗಳನ್ನು ತಮ್ಮ ಸ್ವರೂಪದಲ್ಲಿ ತರುವಂತಹ ವಿಶ್ವ ಕಲ್ಯಾಣಕಾರಿ ಭವ.

ವಿದ್ಯಾಭ್ಯಾಸದಲ್ಲಿ ನಾಲ್ಕು ವಿಷಯಗಳೇನಿವೆ, ಅವೆಲ್ಲವೂ ಒಂದು ಇನ್ನೊಂದರ ಜೊತೆ ಸಂಬಂಧವಿದೆ. ಯಾರು ಜ್ಞಾನಿ ಆತ್ಮನಾಗಿರುತ್ತಾರೆಯೋ ಅವರು ಯೋಗಿ ಆತ್ಮರೂ ಸಹ ಆಗಿಯೇ ಇರುತ್ತಾರೆ ಹಾಗೂ ಯಾರು ತನ್ನಲ್ಲಿ

ಜ್ಞಾನ-ಯೋಗವನ್ನು ಸ್ವಭಾವವನ್ನಾಗಿ ಮಾಡಿಕೊಂಡಿರುತ್ತಾರೆಯೋ ಅವರ ಕರ್ಮವು ಸ್ವಾಭಾವಿಕವಾಗಿಯೇ ಯುಕ್ತಿ ಯುಕ್ತ ಅಥವಾ ಶ್ರೇಷ್ಠವಾಗಿರುವುದು. ಸ್ವಭಾವ-ಸಂಸ್ಕಾರವು ಧಾರಣಾ ಸ್ವರೂಪವಾಗಿರುವುದು. ಯಾರ ಬಳಿ ಈ ಮೂರೂ ವಿಷಯಗಳ ಅನುಭೂತಿಯ ಖಜಾನೆಯಿರುವುದೋ ಅವರು ಸ್ವತಹವಾಗಿಯೇ ಮಾಸ್ಟರ್ ದಾತಾ ಅರ್ಥಾತ್ ಸೇವಾಧಾರಿ ಆಗಿ ಬಿಡುತ್ತಾರೆ. ಯಾರು ಈ ನಾಲ್ಕು ವಿಷಯಗಳಲ್ಲಿ ನಂಬರ್ವನ್ ಆಗುತ್ತಾರೆಯೋ, ಅವರಿಗೇ ವಿಶ್ವ ಕಲ್ಯಾಣಕಾರಿ ಎಂದು ಹೇಳಲಾಗುವುದು.

**ಸ್ಲೋಗನ್:** ಸಾಕ್ಷಿಯಾಗಿದ್ದು ಮಾಯೆಯ ಭಯಾನಕ ರೂಪದ ಆಟವನ್ನು ನೋಡುವಿರೆಂದರೆ ನಿರ್ಭಯರಾಗಿ ಇರುವಿರಿ.

ಅಮೂಲ್ಯ ಜ್ಞಾನರತ್ನ- (ದಾದಿಯರ ಹಳೆಯ ಡೈರಿಯಿಂದ)

ಜ್ಞಾನದ ಅನುಭೂತಿಯ ಸುಖವೇ ಶಾಂತಿ ಅಂದರೆ ನಿರ್ವಿಕಲ್ಪವಾಗಿ ಬಿಡುವುದು. ಅಂತರ್ಮುಖತೆಯಲ್ಲಿ ಹೋಗುವುದರಿಂದ ಶಾಂತ ಸ್ವರೂಪವಾಗುತ್ತೀರಿ. ಈ ಅವಿನಾಶಿ ಜ್ಞಾನದಿಂದ ಸಂಪೂರ್ಣ ಶಾಂತಿಯಿರುವ ಸ್ಥಾನದಲ್ಲಿ ಹೋಗಿ ತಲುಪುತ್ತೀರಿ. ಶಾಂತಿ ಎಂದರೆ ಶ್ರೇಷ್ಠ ಸ್ಥಿತಿಯನ್ನು ಧಾರಣೆ ಮಾಡುವುದರಿಂದ ಯೋಗದ ಪ್ರಕಾಶತೆಯು ಬಹಳಷ್ಟು ಹೊರ ಬರುತ್ತದೆ. ಯಾರು ಇಂತಹ ಮಧುರ ಯೋಗಾವಸ್ಥೆಯಲ್ಲಿ ಹಗಲು-ರಾತ್ರಿ ಇರುತ್ತಾರೆಯೋ ಅವರಿಗೆ ಅಪಾರವಾದ ಖುಷಿಯಿರುತ್ತದೆ. ಅವರ ಎಲ್ಲಾ ಅಲ್ಪಕಾಲದ ಬಂಧನಗಳು ದೂರವಾಗಿ ಬೇಹದ್ದಿನ ಶಾಶ್ವತ ಖುಷಿಯು ಪ್ರಕಟವಾಗಿ ಬಿಡುತ್ತದೆ. ಇಂತಹ ಸ್ಥಿತಿಯಲ್ಲಿ ಹೃದಯವು ಬಹಳ ಹಗುರವಾಗಿರುತ್ತದೆ ಹಾಗೂ ಖುಷಿಯ ಪ್ರಕಂಪನಗಳಲ್ಲಿಯೇ ಸುಗಂಧವು ಅಡಗಿಸಿಡುವುದಿಲ್ಲ. ಇದೇ ಯೋಗದ ಕೀಲಿ ಕೈ ಆಗಿದೆ, ಅದು ನಾವು ದೈವೀ ವತ್ಸರ ತಂದೆಯಾದ ಈಶ್ವರನ ಮೂಲಕ ಪ್ರಾಪ್ತಿಯಾಗಿದೆ. ಒಳ್ಳೆಯದು. ಓಂ ಶಾಂತಿ.